ಕರ್ನಾಟಕ ಸರ್ಕಾರ

**"ಅತ್ಯಂತ ತುರ್ತು"**

ಸಂಖ್ಯೆ: ಡಿಟಿಇ 4 ಜಿಆರ್‌ಟಿ(2) 2016.

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 31-3-2017.

**ಸುತ್ತೋಲೆ**

ವಿಷಯ: ಬಳಕೆ ಪ್ರಮಾಣ ಪತ್ರ ಸಲ್ಲಿಸುವ ಬಗ್ಗೆ.
ಉಲ್ಲೇಖ: 2016-17 ನೇ ಸಾಲಿನ ಮಹಾಲೇಖಪಾಲರ ಲೆಕ್ಕ ತಪಾಸಣೆ ಬಗ್ಗೆ

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕಚೇರಿಯ 2016-17 ನೇ ಸಾಲಿನ ಲೆಕ್ಕಪತ್ರಗಳನ್ನು ಮಹಾಲೇಖಪಾಲರು ಏಪ್ರಿಲ್ 2017 ರಲ್ಲಿ ಕೈಗೊಳ್ಳಲಿದ್ದು ಈ ಸಂದರ್ಬದಲ್ಲಿ ಅನುದಾನಿತ ಸಂಸ್ಥೆಗಳ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ 2015-16 ಮತ್ತು 2016-17 ನೇ ಆರ್ಥಿಕ ವರ್ಷಗಳಿಗೆ ಈ ಕಚೇರಿಯಿಂದ ಬಿಡುಗಡೆಯಾದ ಅನುದಾನಗಳಿಗೆ ಕರ್ನಾಟಕ ಆರ್ಥಿಕ ಸಂಹಿತೆಯ 161(ಬಿ)1(3)(ಐ),161(ಬಿ)(5) ರಂತೆ **ಬಳಕೆ ಪ್ರಮಾಣ ಪತ್ರ** ಗಳನ್ನು ಸಲ್ಲಿಸಬೇಕಾಗಿರುತ್ತದೆ.

ಮೇಲ್ಕಂಡ ದಾಖಲೆಗಳನ್ನು ಸರ್ಕಾರ ಹಾಗೂ ಮಹಾಲೇಖಪಾಲರಿಗೆ ಸಲ್ಲಿಸಬೇಕಾಗಿರುವುದರಿಂದ ಯೋಜನೇತರ ಅಡಿಯಲ್ಲಿನ ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು, ಅನುದಾನಿತ ಪಾಲಿಟೆಕ್ನಿಕ್‌ಗಳು ಮತ್ತು ಅನುದಾನಿತ ಚಿತ್ರಕಲಾ ಶಾಲೆ/ ಮಹಾವಿದ್ಯಾಲಯಗಳ ಪ್ರಿನ್ಸಿಪಾಲರು ತುರ್ತಾಗಿ 2015-16 ಮತ್ತು 2016-17 ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನಗಳಿಗೆ **ಬಳಕೆ ಪ್ರಮಾಣ ಪತ್ರಗಳನ್ನು ಏಪ್ರಿಲ್ ಮೊದಲನೆಯ ವಾರದಲ್ಲಿ ಈ ಕಛೇರಿಗೆ** ಸಲ್ಲಿಸಲು ಅಗತ್ಯ ಕ್ರಮಕೈಗೊಳ್ಳಬೇಕೆಂದು ತಿಳಿಸಲಾಗಿದೆ. ತಪ್ಪಿದಲ್ಲಿ ಮುಂದಿನ ಅನುದಾನ ಬಿಡುಗಡೆಯನ್ನು ತಡೆಹಿಡಿಯಲಾಗುವುದು.

ನಿರ್ದೇಶಕರು

ಇವರಿಗೆ:

ಯೋಜನೇತರ ಅಡಿಯಲ್ಲಿನ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು, ಅನುದಾನಿತ ಪಾಲಿಟೆಕ್ನಿಕ್‌ಗಳು ಮತ್ತು ಅನುದಾನಿತ ಚಿತ್ರಕಲಾ ಶಾಲೆ/ ಮಹಾವಿದ್ಯಾಲಯಗಳ ಪ್ರಿನ್ಸಿಪಾಲರಿಗೆ ಮಾಹಿತಿ ಹಾಗೂ ತುರ್ತು ಸೂಕ್ತ ಕ್ರಮಕ್ಕಾಗಿ.